ಚಿಕ್ಕಮಂಗಳೂರು ಜಿಲ್ಲೆಯಲ್ಲಿ ತೂಕ ಮತ್ತು ಅಳತೆ ದೋಷ ಪತ್ತೆ ಹಚ್ಚಿದ ಪ್ರಕರಣಗಳ ಬಗ್ಗೆ

೧೭೬೯. ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ತೂಕ ಹಾಗೂ ಅಳತೆಯ ದೋಷ ಪತ್ತೆ ಹಚ್ಚಿದ ಪ್ರಕರಣಗಳೆಷ್ಟು ?

ಆ) ಸಾರ್ವಜನಿಕರು ದೂರು ನೀಡಿದರೆ ಮಾತ್ರ ತೂಕ ಹಾಗೂ ಅಳತೆಗಳ ಪರಿಶೀಲಿಸುವುದು ಸಂಬಂಧಪಟ್ಟ ಇಲಾಖೆಯ ದಿನನಿತ್ಯದ ಕರ್ತವ್ಯವಲ್ಲವೆ ?

ಇ) ಹಾಗಿದ್ದಲ್ಲಿ ಕರ್ತವ್ಯ ಲೋಪವೆಸಗಿದವರ ಮೇಲೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಈ) ತಿಂಗಳಿಗೆ ಒಂದು ವರ್ತಿಯಾದರೂ ಜಿಲ್ಲೆಯಲ್ಲಿರುವ ಪೆಟ್ರೋಲ್ ಬಂಕ್‌ಗಳಿಗೆ ಭೇಟಿ ನೀಡಿ ಅಳತೆಯ ಬಗ್ಗೆ ಪರಿಶೀಲಿಸಿ ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಮಂತ್ರಿಗಳು).—

ಅ) ೪೦೨ ಮೊಕದ್ದಮೆಗಳು

ಆ) ಈ ಇಲಾಖೆಗೆ ಸಂಬಂಧಿಸಿದ ಕ್ಷೇತ್ರಾಧಿಕಾರಿಗಳು ಅಂದರೆ ಸಹಾಯಕ ನಿಯಂತ್ರಕರು ಹಾಗೂ ನಿರೀಕ್ಷಕರು ದಿನನಿತ್ಯದ ಕಛೇರಿಯ ಕಾರ್ಯಕ್ರಮಗಳಲ್ಲಿ ತೂಕ ಮತ್ತು ಅಳತೆಗಳನ್ನು ಪರಿಶೀಲಿಸಿ ಅವುಗಳಲ್ಲಿ ಕಂಡು ಬರುವ ನ್ಯೂನತೆಗಳ ವಿರುದ್ಧ ತಪ್ಪಿತಸ್ಥರ ಮೇಲೆ ಕಾನೂನು ಬದ್ಧವಾಗಿ ಕ್ರಮ ಕೈಗೊಳ್ಳುವ ಕಾರ್ಯಕ್ರಮವು ಒಂದಾಗಿರುತ್ತದೆ. ಸಾರ್ವಜನಿಕರು ನೀಡುವ ದೂರುಗಳನ್ನು ಗಮನಿಸುವುದೇ ಅಲ್ಲದೆ ವಿಶೇಷ ತಪಾಸಣೆ ಕೈಗೊಂಡು ತಪ್ಪಿತಸ್ಥರ ವಿರುದ್ಧ ಮೊಕದ್ದಮೆಯನ್ನು ಸಹ ಹೂಡಲಾಗುತ್ತಿದೆ.

ಇ) ಈ ಇಲಾಖೆಯ ಕ್ಷೇತ್ರಾಧಿಕಾರಿಗಳು ಈ ಬಗ್ಗೆ ಕ್ರಮ ಕೈಗೊಳ್ಳುತ್ತಿರುವುದರಿಂದ ಇದು ಉದ್ಭವಿಸುವುದಿಲ್ಲ.

ಈ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಟ್ಟು ೨೮ ಪೆಟ್ರೋಲ್ ಪಂಪುಗಳಿರುತ್ತವೆ. ಸದರಿ ಸಹಾಯಕ ನಿಯಂತ್ರಕರು ನಿಯತಕಾಲಿಕ ತನಿಖೆಯನ್ನು ಜಿಲ್ಲೆಯಲ್ಲಿ ಕೈಗೊಂಡು ೪೨ ಬಾರಿ ಪೆಟ್ರೋಲ್ ಬಂಕ್ ತನಿಖೆಯನ್ನು ನಡೆಸಿರುತ್ತಾರೆ ಜಿಲ್ಲೆಯ ಸಹಾಯಕ ನಿಯಂತ್ರಕರಿಗೆ ಜಿಲ್ಲೆಯಲ್ಲಿ ಬರುವ ಎಲ್ಲಾ ಪೆಟ್ರೋಲ್ ಬಂಕ್‌ಗಳನ್ನು ತಿಂಗಳಿಗೆ ಒಮ್ಮೆ ತನಿಖೆ ಮಾಡುವಂತೆ ಸೂಚನೆ ಕೊಡಲಾಗಿದೆ.

ಭೂ ಸುಧಾರಣಾ ಕಾನೂನಿನ ಸೆಕ್ಷನ್‌ಗೆ ತಿದ್ದುಪಡಿ

೨೩೨೪. ಶ್ರೀ ಸಿ. ಎಂ. ರೇವಣ್ಣಸಿದ್ದಯ್ಯ (ಸಿರಗುಪ್ಪ).—ಮಾನ್ಯ ಕಂದಾಯ, ಹಾಗೂ ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಭೂ ಸುಧಾರಣಾ ಕಾನೂನಿನ ಸೆಕ್ಷನ್ ೫೭, ಎ,ಬಿ,ಸಿ,ಗೆ ತಿದ್ದುಪಡಿ ತರಬೇಕೆಂದು ನಿಜವೆ ?

ಆ) ಹಾಗಿದ್ದಲ್ಲಿ ಈವರೆಗೂ ಆ ತಿದ್ದುಪಡಿಗಳನ್ನು ಜಾರಿಗೆ ತರದೇ ಇರುವುದಕ್ಕೆ ಕಾರಣಗಳೇನು ?

ಇ) ಈಗಲಾದರೂ ಕರ್ನಾಟಕ ಭೂ ಸುಧಾರಣಾ ಕಾನೂನನ್ನು ಪುನರ್ ಪರಿಶೀಲಿಸಿ ಸಮಗ್ರ ತಿದ್ದುಪಡಿ ತರಲು ಸರ್ಕಾರದವರು ಕ್ರಮ ಕೈಕೊಳ್ಳುವರೆ ?

ಈ) ಹಾಗಿದ್ದಲ್ಲಿ ಎಷ್ಟು ದಿನಗಳಲ್ಲಿ ಕ್ರಮ ಕೈಗೊಳ್ಳುವರು ?